**ಓ.ಎಸ್. ನಂ. 17/2023** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 19.12.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕಃ 22.08.2007 ರ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ 1 ಎಂದು, 9 ಗಣಕೀಕೃತ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ 2 ರಿಂದ 10 ಎಂದು, ಒಂದು ಈಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 11 ಎಂದು, ಚೆಸ್ಕಾಂ ಮೈಸೂರು ಇವರು ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ನೀಡಿರುವ ದಾಖಲೆಯನ್ನು ನಿಡಿ 12 ಎಂದು, ಪಿಡಿಓ ಹಾಗೂ ತೋಟಗಾರಿಗೆ ನಿರ್ದೇಶಕರು ನೀಡಿರುವ ದೃಢೀಕರಣ ಪತ್ರಗಳನ್ನು ಹಾಜರುಪಡಿಸಿದ್ದು ನಿಡಿ 13 ಮತ್ತು 14 ಎಂದು, 3 ತೆರಿಗೆ ಪಾವತಿಯ ರಶೀದಿಗಳನ್ನು ಹಾಜರುಪಡಿಸಿದ್ದು ನಿಡಿ 15 ರಿಂದ 17 ಎಂದು, ಒಂದು ಪಟ್ಟಾ ಪುಸ್ತಕವನ್ನು ನಿಡಿ 18 ಎಂದು, 5 ಭಾವಚಿತ್ರಗಳನ್ನು ಹಾಜರುಪಡಿಸಿದ್ದು ನಿಡಿ 19 ರಿಂದ 23 ಎಂದು, ಅವುಗಳಿಗೆ ಸಂಬಂಧಪಟ್ಟ ಪೆನ್ ಡ್ರೈವ್ ಅನ್ನು ನಿಡಿ 24 ಎಂದು ಒಂದು ಗಣಕೀಕೃತ ಪಹಣಿಯನ್ನು ನಿಡಿ 25 ಎಂದು, ಒಂದು ಮುಟೇಶನ್ ರಿಜಿಸ್ಟರ್ ಅನ್ನು ನಿಡಿ 26 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.